# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 140 |
| ಮಾನ್ಯ ಸದಸ್ಯರ ಹೆಸರು | ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16-07-2019 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಈ ವರ್ಷ ಹೆಚ್1-ಎನ್1 (ಹಂದಿ ಜ್ವರ)ರೋಗ ದಿನೇ ದಿನೇ ಹರಡುತ್ತಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ಅಧಿಕ ಸಾವುಗಳು ಸಂಭವಿಸಿರುವುದು ನಿಜವೇ: | ನಿಜ<br>ರಾಜ್ಯದಲ್ಲಿ ಹೆಚ್1-ಎನ್1 (ಹಂದಿ ಜ್ವರ) ಕಳೆದ ವರ್ಷ 1733 ಖಚಿತ ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ದಿನಾಂಕ:11-7-2019 ವರಗೆ 1774 ಖಚಿತ ಪ್ರಕರಣಗಳು ವರದಿಯಾಗಿರುತ್ತವೆ. ಕಳೆದ ವರ್ಷ ಈ ಸೋಂಕಿನಿಂದ 87 ಜನರು ಹಾಗೂ ಈ ವರ್ಷ ದಿನಾಂಕ:11-7-2019 ವರೆಗೆ 87 ಜನರು ಸಾವನ್ನಪ್ಪಿದ್ದಾರೆ. |
| ಆ) | ಹಂದಿಜ್ವರ ಹರಡದಂತೆ ತಡೆಗಟ್ಟಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು: | ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ) | ಕಳೆದ 03 ವರ್ಷಗಳಲ್ಲಿ ಈ ರೋಗದಿಂದ ಮೃತಪಟ್ಟವರ ಜಿಲ್ಲಾವಾರು ವಿವರಗಳನ್ನು ಒದಗಿಸುವುದು? | ಕಳೆದ 03 ವರ್ಷಗಳಲ್ಲಿ ಹೆಚ್1ಎನ್1 ಸೋಂಕಿನಿಂದ ಮೃತಪಟ್ಟವರ ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

ಆಕುಕ 02 ಎಸ್ಎಂಎಂ 2019

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

- ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ "ಅಂತರ ಇಲಾಖಾ ಕೋ ಆರ್ಡಿನೇಷನ್ ಕಮಿಟಿ" ಸಭೆಯಲ್ಲಿ ಹೆಚ್1ಎನ್1 ತೀವ್ರತೆ ಬಗ್ಗೆ ಚರ್ಚಿಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.
- ಎಲ್ಲಾ ದೈನಂದಿನ ಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಮತ್ತು ತಿಳುವಳಿಕೆ ನೀಡಲಾಗಿದೆ.
- "ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿ" ಮೂಲಕ ಹೆಚ್1ಎನ್1 ಸೋಂಕಿನ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.
- ದೂರದರ್ಶನ ಮತ್ತು ರೇಡಿಯೋ ಮಾಧ್ಯಮಗಳ ಮೂಲಕ, ರಾಜ್ಯದ 570 ಸಿನಿಮಾ ಮಂದಿರಗಳಲ್ಲಿ ಸ್ಲೈಡ್ಸ್‌ಗಳ ಮೂಲಕ, 3 ಹೆಸರಾಂತ ಎಫ್.ಎಮ್ ರೇಡಿಯೋ ಮೂಲಕ, 170 ಬಸ್ ನಿಲ್ದಾಣಗಳಲ್ಲಿ ಜಿಂಗಲ್ಸ್ ಗಳ ಮೂಲಕ ಹಾಗೂ KSRTC, BMTC ಮೆಟ್ರೋ ಸ್ಟೇಷನ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ವೀಡಿಯೋ ಕ್ಲಿಪಿಂಗ್ಸ್‌ಗಳ ಮೂಲಕ ಹೆಚ್1ಎನ್1 ಬಗ್ಗೆ ಮಾಹಿತಿ ಹಾಗೂ ಜಾಗೃತಿ ನೀಡಲಾಗುತ್ತಿದೆ.

**ಸಾರ್ವಜನಿಕರ ತಿಳುವಳಿಕೆಗಾಗಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಮಾಹಿತಿಯನ್ನು IEC ಮೂಲಕ ತಿಳಿಸಲಾಗಿದೆ**

**ಏನು ಮಾಡಬೇಕು:-**

- ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು, ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು.
- ವೈಯ್ಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳುವುದು. ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.
- ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್/ಕೈವಸ್ತ್ರ ಉಪಯೋಗಿಸುವುದು. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು
- ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದು, ಚೆನ್ನಾಗಿ ನಿದ್ದೆ ಮಾಡುವುದು, ಒತ್ತಡಗಳನ್ನು ನಿಭಾಯಿಸುವುದು

**ಏನು ಮಾಡಬಾರದು:-**

- ಸೋಂಕಿತರ ಕೈ ಕುಲುಕುವುದು, ಚುಂಬಿಸುವುದು ಮತ್ತು ಆಲಂಗಿಸಿಕೊಳ್ಳುವುದನ್ನು ಮಾಡಬಾರದು.
- ತಜ್ಞ ವೈದ್ಯರ ಸಲಹೆ ಇಲ್ಲದೆ ಔಷದೋಪಚಾರ ಮಾಡಬಾರದು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು. ಆಸ್ಪಿರಿನ್ ಮಾತ್ರೆಗಳನ್ನು ಮಕ್ಕಳಿಗೆ ನೀಡಬಾರದು.

***ದಿನಾಂಕ:10-6-2019 ರಿಂದ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗಿರುತ್ತದೆ. ಅಲ್ಲದೆ ದಿನಾಂಕ:24-5-2019 ರಿಂದ ಯಾವುದೇ ಮರಣಗಳು ಸಂಭವಿಸಿರುವುದಿಲ್ಲ.***

| ಅನುಬಂಧ-2 | | | | |
|---|---|---|---|---|
| ಕ್ರಮ ಸಂ | ಜಿಲ್ಲೆಗಳು | 2017 | 2018 | 2019 |
| 1 | ಬಿ.ಬಿ.ಎಂ.ಪಿ. | 2 | 3 | 0 |
| 2 | ಬೆಂಗಳೂರು ನಗರ ಜಿಲ್ಲೆ | 0 | 6 | 3 |
| 3 | ಬೆಂಗಳೂರು (ಗ್ರಾ) ಜಿಲ್ಲೆ | 0 | 2 | 3 |
| 4 | ಚಿತ್ರದುರ್ಗ | 1 | 6 | 6 |
| 5 | ದಾವಣಗೆರೆ | 0 | 6 | 12 |
| 6 | ಕೋಲಾರ | 1 | 1 | 0 |
| 7 | ಶಿವಮೊಗ್ಗ | 2 | 3 | 13 |
| 8 | ತುಮಕೂರು | 1 | 8 | 3 |
| 9 | ರಾಮನಗರ | 0 | 1 | 1 |
| 10 | ಚಿಕ್ಕಬಳ್ಳಾಪುರ | 0 | 1 | 3 |
| 11 | ಬೆಳಗಾಂ | 1 | 2 | 4 |
| 12 | ಬಿಜಾಪುರ | 0 | 0 | 3 |
| 13 | ಬಾಗಲಕೋಟೆ | 0 | 0 | 0 |
| 14 | ಧಾರವಾಡ | 0 | 11 | 1 |
| 15 | ಗದಗ | 0 | 2 | 1 |
| 16 | ಹಾವೇರಿ | 2 | 3 | 1 |
| 17 | ಉತ್ತರ ಕನ್ನಡ ಜಿಲ್ಲೆ | 1 | 1 | 5 |
| 18 | ಬಳ್ಳಾರಿ | 1 | 0 | 2 |
| 19 | ಬೀದರ್ | 0 | 0 | 2 |
| 20 | ಗುಲ್ಬರ್ಗ | 0 | 0 | 0 |
| 21 | ಯಾದಗೀರ್ | 0 | 1 | 0 |
| 22 | ಕೊಪ್ಪಳ | 0 | 4 | 1 |
| 23 | ರಾಯಚೂರ್ | 0 | 1 | 0 |
| 24 | ಚಿಕ್ಕಮಗಳೂರು | 2 | 0 | 1 |
| 25 | ದಕ್ಷಿಣ ಕನ್ನಡ | 0 | 5 | 3 |
| 26 | ಉಡುಪಿ | 0 | 0 | 9 |
| 27 | ಹಾಸನ | 0 | 7 | 3 |
| 28 | ಕೊಡಗು | 0 | 0 | 0 |
| 29 | ಮಂಡ್ಯ | 0 | 2 | 2 |
| 30 | ಮೈಸೂರು | 1 | 10 | 4 |
| 31 | ಚಾಮರಾಜನಗರ | 0 | 1 | 1 |
| | ಒಟ್ಟು | **15** | **87** | **87** |

ಸಹ ನಿರ್ದೇಶಕರು(ಸಿಎಂಡಿ)
ಆರೋಗ್ಯ ಮತ್ತು ಕು ಕ ಸೇವೆಗಳು